# ಜೋಗದ ಸಿರಿ ಕತ್ತಲಿನಲ್ಲಿ...

**ಹಗಲಿನಲ್ಲಿ ಜೋಗದ ಸೌಂದರ್ಯ ನಯನಮನೋಹರ. ಇರುಳಿನಲ್ಲಿ ಜೋಗ ಹೇಗೆ ಕಾಣುತ್ತದೆ, ಬಲ್ಲಿರಾ?**

■ ಗುರು ಪಿ.ಎಸ್.
ಕಲೆ: ಈಶ್ವರ ಬಡಿಗೇರ್



‘ಫಂಕ್ಷನ್‌ಗೆ ಇನ್ನೂ ಹತ್ತು ದಿನ ಇದೆ, ಈಗಲೇ ಶಿವಮೊಗ್ಗಕ್ಕೆ ರೈಲು ಟಿಕೆಟ್ ರಿಸರ್ವ್ ಮಾಡಿಸಿದೀರಲ್ರೀ’ ಕೇಳಿದಳು ಹೆಂಡತಿ.

‘ಈಗ ರಜೆ ಅಲ್ಲವಾ, ತುಂಬಾ ಜನ ಊರುಗಳಿಗೆ ಓಡಾಡ್ತಿರ್ತಾರೆ. ಕೊನೆ ಗಳಿಗೆಯಲ್ಲಿ ಸೀಟು ಸಿಗದಿದ್ದರೆ ಕಷ್ಟ ಆಗುತ್ತೆ ಅಂತ ಬೇಗ ಬುಕ್ ಮಾಡ್ತಿದೀನಿ’.

ಸಹೋದ್ಯೋಗಿಯೊಬ್ಬರ ಗೃಹಪ್ರವೇಶ ಕಾರ್ಯಕ್ರಮಕ್ಕೆ ಹೋಗುವ ನೆಪದಲ್ಲಿ ಶಿವಮೊಗ್ಗ ಜಿಲ್ಲೆಯ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ಮಕ್ಕಳಿಗೆ ತೋರಿಸಿಕೊಂಡು ಬರುವುದು ನನ್ನ ಉದ್ದೇಶವಾಗಿತ್ತು.

‘ಆದರೂ ಇಷ್ಟು ಬೇಗ ಟಿಕೆಟ್ ಬುಕ್ ಮಾಡಬೇಕಿತ್ತಾ?’

‘ಕೊನೆ ಗಳಿಗೆಯಲ್ಲಿ ಅವಸರವಸರ ಮಾಡಿಕೊಂಡು ಕಷ್ಟ ಪಡೋಕೆ ನನಗಿಷ್ಟವಿಲ್ಲ. ಫ್ಯಾಮಿಲಿ ಬೇರೆ ಹೋಗ್ತಿದೀವಿ, ಎಲ್ಲದಕ್ಕೂ ಒಂದು ಪಕ್ಕಾ ಪ್ಲ್ಯಾನ್ ಇದ್ದರೆ ಪ್ರವಾಸ ಸರಾಗ’ ಎಂದೆ.

ಮಕ್ಕಳು ಮತ್ತು ಅವಳ ಬಗ್ಗೆ ನನಗಿದ್ದ ಕಾಳಜಿ ಕಂಡು ಹೆಂಡತಿಗೆ ಒಳಗೊಳಗೇ ಖುಷಿಯಾಗಿ, ಹೆಮ್ಮೆ ಎನಿಸಿದರೂ ಅದನ್ನು ಹೇಳದೆ ಸುಮ್ಮನಾದಳು!

ಗೃಹಪ್ರವೇಶ ಕಾರ್ಯಕ್ರಮ ಇದ್ದದ್ದು ಸಾಗರ ತಾಲ್ಲೂಕಿನ ಒಂದು ಹಳ್ಳಿಯಲ್ಲಿ. ಕಾರ್ಯಕ್ರಮ ಸೋಮವಾರ ಇದ್ದರೂ, ಎರಡು ದಿನ ಮೊದಲೇ, ಅಂದರೆ, ಶನಿವಾರ ಸಂಜೆಯೇ ಶಿವಮೊಗ್ಗದಲ್ಲಿ ಇಳಿದೆವು. ಶಿವಮೊಗ್ಗ ನಗರದಲ್ಲಿಯೇ ಇರುವ ಮತ್ತೊಬ್ಬ ಸಹೋದ್ಯೋಗಿಯ ಮನೆಯಲ್ಲಿ ಅಂದು ರಾತ್ರಿ ಉಳಿದೆವು. ಹಲವು ವರ್ಷಗಳ ನಂತರ ಕುಟುಂಬ ಸಮೇತ ಭೇಟಿಯಾಗಿದ್ದರಿಂದ ಮಾತು, ಹರಟೆ, ಊಟ–ಉಪಾಹಾರ ಎಲ್ಲ ಜೋರಾಗಿಯೇ ಇತ್ತು.

‘ಅಪ್ಪ, ಜೋಗ್ ಫಾಲ್ಸ್‌ಗೆ ಯಾವಾಗ ಹೋಗೋದು?’ ನನ್ನ ಚಿಕ್ಕಮಗಳು ಓಡಿ ಬಂದು ಕೇಳಿದಳು.

‘ನಾಳೆ ಬೆಳಿಗ್ಗೆಯೇ ಹೊರಡೋಣ. ಅದಕ್ಕೆ ತಾನೆ ಎರಡು ದಿನ ಮೊದಲೇ ಬಂದಿರೋದು’ ಎಂದೆ.

ಭಾನುವಾರ ಬೆಳಿಗ್ಗೆಯೂ ಭರ್ಜರಿ ಉಪಾಹಾರ, ಮಾತು–ಕತೆ ಎಲ್ಲ ಮುಗಿಸಿ 12 ಗಂಟೆಯೊಳಗೆ ಜೋಗಕ್ಕೆ ಹೊರಡಲು ಸಜ್ಜಾದೆವು.

ನೇರವಾಗಿ ಕಾರ್ಗಲ್‌ಗೆ ಹೋಗಿ, ಜೋಗ ಜಲಪಾತದ ಬಳಿಯೇ ರೂಮ್‌ನ ವ್ಯವಸ್ಥೆ ಮಾಡಿಕೊಂಡು, ಅಲ್ಲಿಯೇ ಆ ದಿನ ಕಳೆಯಬೇಕು ಎಂಬ ಪ್ಲ್ಯಾನ್ ನನ್ನದಾಗಿತ್ತು. ಸಾಗರದ ಖಾಸಗಿ ಬಸ್ ನಿಲ್ದಾಣದೊಳಗೆ ಹೋಗುತ್ತಿರುವಂತೆಯೇ, ಶಿವಮೊಗ್ಗದ ಸಹೋದ್ಯೋಗಿ ಫೋನ್ ಮಾಡಿ, ‘ಜೋಗದ ಹತ್ತಿರ ಡಾರ್ಮಿಟರಿ ರೀತಿಯ ರೂಮ್‌ಗಳಿವೆ. ನಿಮಗೆ ಸರಿ ಎನಿಸದು. ನಾನು ಸಾಗರದಲ್ಲಿಯೇ ನಿಮಗಾಗಿ ರೂಮ್ ಮಾಡಿದ್ದೇನೆ. ಜೋಗ ನೋಡಿ ಬಂದು, ಆ ರೂಮ್‌ನಲ್ಲಿಯೇ ನೀವು ಉಳಿದುಕೊಳ್ಳಬಹುದು’ ಎಂದರು.

ನನಗೂ ಸರಿ ಎನಿಸಿತು. ಆಗ ಸಮಯ ಮಧ್ಯಾಹ್ನ 2 ಗಂಟೆ. ರೂಮ್‌ಗೆ ಹೋಗಿ ಲಗೇಜ್ ಇಟ್ಟು, ನಂತರ ಜೋಗ ಬಸ್ ಹಿಡಿಯೋಣ ಎಂದು ಹೆಂಡತಿಗೆ ಹೇಳಿದೆ. ಮಕ್ಕಳೂ ಓಕೆ ಎಂದರು.

ಗೂಗಲ್ ಮ್ಯಾಪ್‌ನಲ್ಲಿ ‘ಸಾಗರ ಟು ಜೋಗ್ ಫಾಲ್ಸ್’ ಎಂದು ಟೈಪ್ ಮಾಡಿ ದೂರ ಎಷ್ಟೆಂದು ನೋಡಿದೆ. 35 ಕಿ.ಮೀ., ಸಮಯ 52 ನಿಮಿಷ ಎಂದು ತೋರಿಸುತ್ತಿತ್ತು. ಸರಿ, ಮಧ್ಯಾಹ್ನ ಜೋಗಕ್ಕೆ ಹೋಗಿ ಏನ್ ಮಾಡೋಣ, ಸಾಗರದಲ್ಲಿ ರೂಮ್‌ನಲ್ಲೇ ಲಗೇಜ್ ಇಟ್ಟು, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಹೊರಡೋಣ ಎಂದು ನಿರ್ಧರಿಸಿದೆವು. ಮತ್ತೆ ಖಾಸಗಿ ಬಸ್ ನಿಲ್ದಾಣಕ್ಕೆ ಬಂದಾಗ 3.40 ಆಗಿತ್ತು. ಜೋಗ್ ಫಾಲ್ಸ್‌ಗೆ ಹೋಗೋ ಬಸ್ 4 ಗಂಟೆಗೆ ಬರಬಹುದು ಎಂದರು ಅಲ್ಲಿದ್ದವರು. 4 ಅಲ್ಲ, 4.30 ಆದರೂ ಬಸ್ ಬರಲೇ ಇಲ್ಲ! ಕೊನೆಗೆ, 4.50ಕ್ಕೆ ಬಂದ ಬಸ್ ಹೊರಟಿದ್ದು 5.05ಕ್ಕೆ. ಗೂಗಲ್ ಮ್ಯಾಪ್ ತೋರಿಸಿದಂತೆ, 52 ನಿಮಿಷದಲ್ಲೇ ಹೋದರೂ, 6 ಗಂಟೆ ವೇಳೆಗೆ ಜೋಗ ತಲುಪಬಹುದು ಎಂದು ಸಮಾಧಾನ ಮಾಡಿಕೊಂಡೆ.

ಪ್ರತಿ ಹಳ್ಳಿಯಲ್ಲಿಯೂ ನಿಲ್ಲಿಸುತ್ತಾ, ಯಾರೆಲ್ಲಿ ಕೈ ಮಾಡುತ್ತಾರೋ, ಅಲ್ಲೆಲ್ಲ ಸ್ಟಾಪ್ ಕೊಡುತ್ತಾ ಹೊರಟಿತು ಬಸ್. 6.20 ಆದರೂ ಕಾರ್ಗಲ್ ಬರಲೇ ಇಲ್ಲ!

‘ಅಪ್ಪ, ಇನ್ನೂ ಎಷ್ಟು ದೂರ ಇದೆ ಜೋಗ, ಇಲ್ಲೇ ಹತ್ತಿರ ಇದೆ ಅಂದಿದ್ಯಲ್ಲ ನೀನು’ ಎಂದು ಕೇಳಿದರು ಮಕ್ಕಳು.

‘ಬಂದೇ ಬಿಡ್ತು ಇಲ್ಲೇ ಹತ್ತಿರ ಇದೆ. ಅಷ್ಟಕ್ಕೂ ಜೋಗ ಜಲಪಾತ ನೋಡೋಕೆ ಜಾಸ್ತಿ ಸಮಯ ಏನ್ ಬೇಕಿಲ್ಲ’ ಎಂದೆ ಸಮಾಧಾನಪಡಿಸಲು. ದೊಡ್ಡ ಮಗಳು ಮೊಬೈಲ್ ತೆಗೆದು, ಮ್ಯಾಪ್‌ನಲ್ಲಿ ಮತ್ತೆ ಸರ್ಚ್ ಕೊಟ್ಟಳು. ಜೋಗ್ ಫಾಲ್ಸ್ 5 km, 10 minutes ಎಂದು ತೋರಿಸುತ್ತಿತ್ತು. ಕಾರ್ಗಲ್ ಬಂತು. ಆದರೆ ಇನ್ನೂ ಜೋಗ ಜಲಪಾತದ ನಿಲ್ದಾಣ ಬರಲಿಲ್ಲ. ಈ ಹಿಂದೆ ನಾನು ಸ್ನೇಹಿತನೊಡನೆ ಜೋಗ ನೋಡಿದ್ದರಿಂದ ಆ ನಿಲ್ದಾಣ ನೆನಪಿತ್ತು. ಆ ನಿಲ್ದಾಣ ಬಂದ ಕೂಡಲೇ